ಕುರಿತು ತಜ್ಞ ಸಂಸ್ಥೆಯಿಂದ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವದ ವರದಿ ಪಡೆದು ಈ ಕುರಿತಂತೆ 2012–13ರ ಸಾಲಿನಲ್ಲಿ ಅನುಮೋದಿಸುವ ಕುರಿತು ಪರಿಶೀಲಿಸಲುದ್ದೇಶಿಸಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಸದರಿ ಯೋಜನೆಗೆ ಅನುಮೋದಿಸಲು ಒಪ್ಪಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವು ದೇನೆಂದರೆ, ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಹಾಗೆಯೇ ಶುದ್ಧವಾದ ನೀರು ಸಿಗುತ್ತದೆ ಮತ್ತೆ ಅಲ್ಲಿ ವಿದ್ಯುತ್ ಸೌಲಭ್ಯದ ಅವಶ್ಯಕತೆ ಕೂಡ ಇರುವುದಿಲ್ಲ. ಆದ್ದರಿಂದ, ಈಗ ಬಂದಿರುವ ಅಂದಾಜಿಗೆ ದಯಮಾಡಿ ಒಪ್ಪಿಗೆ ನೀಡಿ ಸುಮಾರು 70 ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆಯನ್ನು ನೀಗಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು.

9) **ವಿಷಯ : ಹೊಸದುರ್ಗ ತಾಲ್ಲೂಕು ಗೊರವಿನಕಲ್ಲು ಗ್ರಾಮದ ರಿ.ಸರ್ವೆ ನಂ.59 ರ ಸರ್ಕಾರಿ ಜಾಗ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸ್ಥಳದಲ್ಲಿ ಸರ್ವೇ ನಂ.60ರ ಗೊರವಿನಕಲ್ಲು ಜಾಗದ ದಾಖಲೆ ತೋರಿಸಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ದಾಖಲೆಗಳನ್ನು ಮಾಡಿ ಒತ್ತುವರಿ ಮಾಡಿಕೊಂಡು ವಾಣಿಜ್ಯ ಕಟ್ಟಡ ಕಟ್ಟಿರುವ ಪುರಸಭೆಯ ಈಗಿನ ಅಧ್ಯಕ್ಷರು ಇವರ ಮೇಲೆ ಹಾಗೂ ಇವರಿಗೆ ದಾಖಲೆ ಗಳನ್ನು ಮಾಡಿಕೊಟ್ಟವರ ಮೇಲೆ ಸೂಕ್ತ ಕ್ರಮ ಜರುಗಿಸುವ ಬಗ್ಗೆ**

ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕು ಗೊರವಿನಕಲ್ಲು ಗ್ರಾಮದ ರಿ.ಸರ್ವೇ ನಂ.59ರ ಸರ್ಕಾರಿ ಜಾಗ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸ್ಥಳದಲ್ಲಿ ಸರ್ವೇ ನಂ.60ರ ಗೊರವಿನಕಲ್ಲು ಜಾಗದ ದಾಖಲೆ ತೋರಿಸಿ ಅಧಿಕಾರ ದುರುಪ ಯೋಗಪಡಿಸಿಕೊಂಡು ಅಕ್ರಮ ದಾಖಲೆಗಳನ್ನು ಮಾಡಿ ಒತ್ತುವರಿ ಮಾಡಿಕೊಂಡು ವಾಣಿಜ್ಯ ಕಟ್ಟಡ ಕಟ್ಟಿರುವ ಪುರಸಭೆಯ ಈಗಿನ ಅಧ್ಯಕ್ಷರು ಇವರ ಮೇಲೆ ಹಾಗೂ ಇವರಿಗೆ ದಾಖಲೆಗಳನ್ನು ಮಾಡಿಕೊಟ್ಟವರ ಮೇಲೆ

ಸೂಕ್ತ ಕ್ರಮ ಜರುಗಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು : ಉತ್ತರ ಪ್ರತಿ ಕೊಟ್ಟಿದ್ದಾರೆ. ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಗೊರವಿನಕಲ್ಲು ಗ್ರಾಮದ ರಿ.ಸ.ನಂ.59 ರಲ್ಲಿ 17-20 ಎಕರೆ ಸರ್ಕಾರಿ ಕೆರೆ ಅಂಗಳ ಇರುತ್ತದೆ. ರಿ.ಸ.ನಂ.60ರಲ್ಲಿ ಒಟ್ಟು 0-28 ಎಕರೆ ವಿಸ್ತೀರ್ಣದ ಭೂಮಿ ಇದ್ದು, ಅದರಲ್ಲಿ 0-02 ಎಕರೆ ಪೂಟ್ ಖರಾಬ್ ಬಿ ಆಗಿರುತ್ತದೆ. ಖರಾಬು ಜಾತ 0-26 ಎಕರೆ ಇದ್ದು, ಇದರಲ್ಲಿ 0-24.04 ಎಕರೆ ಹೆಚ್.ಬಿ. ಮಂಜುನಾಥ ಬಿನ್ ಟಿ.ಹೆಚ್. ಬಸವರಾಜ್, (ಹಾಲಿ ಪುರಸಭಾ ಅಧ್ಯಕ್ಷರು) ಇವರ ಹೆಸರಿಗೆ ಖಾತೆ ಇರುತ್ತದೆ. ಈ ಪ್ರದೇಶವು ದಿನಾಂಕ: 13-9-2004 ರಂದು ಭೂ ಪರಿವರ್ತನೆಯಾಗಿರುತ್ತದೆ. ಈ ಜಮೀನಿಗೆ ಹೊಂದಿಕೊಂಡಂತೆ ರಿ.ಸ.ನಂ. 59ರ ಸರ್ಕಾರಿ ಕೆರೆ ಅಂಗಳದಲ್ಲಿ 0-01 1/2(ಒಂದೂವರೆ ಗುಂಟೆ) ಪ್ರದೇಶವನ್ನು ಒತ್ತುವರಿ ಮಾಡಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸಿರುವುದಾಗಿ ದಿನಾಂಕ: 16-8-2011 ರಂದು ಅಳತೆ ಮಾಡಿದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಒತ್ತುವರಿದಾರರಿಗೆ ದಿನಾಂಕ: 17-9-2011 ರಂದು ನೋಟೀಸ್ ನೀಡಲಾಗಿತ್ತು.

ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 192ರ ಎ ರನ್ವಯ ಎಫ್ಐಆರ್- 333/2011 ದಿನಾಂಕ: 25-12-2011 ರಂದು ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಒತ್ತುವರಿದಾರರು ಒಂದೂವರೆ ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿರುವುದು ಕಂಡುಬಂದ ತಕ್ಷಣವೇ ತೆರವು ಗೊಳಿಸಲು ನೋಟೀಸ್ ನೀಡಿ ಕ್ರಮ ತೆಗೆದುಕೊಳ್ಳಲಾಗಿದೆ.

ಈ ನೋಟೀಸನ್ನು ಪ್ರಶ್ನಿಸಿ ಒತ್ತುವರಿದಾರರು ಉಪ ವಿಭಾಗಾಧಿಕಾರಿ, ಚಿತ್ರದುರ್ಗ ಇವರ ನ್ಯಾಯಾಲಯದಲ್ಲಿ ಆರ್.ಎ. 228/2011 ರನ್ವಯ ಮೇಲ್ಮನವಿ ಸಲ್ಲಿಸಿದ್ದು ವಿಚಾರಣೆ ನಡೆಯುತ್ತಿರುವಾಗಲೇ ಒತ್ತುವರಿದಾರರು ಚಿತ್ರದುರ್ಗ Vacation ನ್ಯಾಯಾಲಯದಲ್ಲಿ ನಂ.ವಿಓಎಸ್: 33/11 ದಿ: 23-12-2011 ರಲ್ಲಿ ಯಾಥಾಸ್ಥಿತಿ (Statusquo) ಇರುವಂತೆ ಆದೇಶಿಸಿದೆ.

ತದನಂತರ ಹೊಸದುರ್ಗ ಸಿವಿಲ್ (ಜೆ.ಎಂ.ಎಫ್.ಸಿ.) ನ್ಯಾಯಾಲಯದಲ್ಲಿ ಓ.ಎಸ್. ನಂ.4/2012 ರಲ್ಲಿ ಪ್ರಕರಣ ವರ್ಗಾವಣೆಯಾಗಿ ವಿಚಾರಣೆ ನಡೆಯುತ್ತಿದೆ. ದಿನಾಂಕ: 2-1-2012, 11-1-2012, 30-1-2012, 21-2-2012, 29-2-2012, 19-3-2012, 20-3-2012, 22-3-2012, 24-3-2012 ರಂದು ವಿಚಾರಣೆ ನಡೆದು ಮುಂದಿನ ವಿಚಾರಣೆಯನ್ನು ದಿನಾಂಕ: 2-4-2012 ಕ್ಕೆ ಮುಂದೂಡಿದೆ.

ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಯಥಾಸ್ಥಿತಿ (Statusquo) ಕಾಯ್ದುಕೊಳ್ಳಲು ಆದೇಶಿಸಿರುವ ಕಾರಣ ಸದ್ಯಕ್ಕೆ ಮುಂದಿನ ಕ್ರಮ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ. ಆದರೆ ಒತ್ತುವರಿದಾರರಿಗೆ ಭೂಮಿ ಒತ್ತುವರಿ ಮಾಡಲು ಯಾವುದೇ ಅವಕಾಶ ಮಾಡಿ ಕೊಟ್ಟಿರುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ : ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರವಾಗಿರುವ ಹೊಸದುರ್ಗ ತಾಲ್ಲೂಕು ನಗರದಲ್ಲಿ ಸುಮಾರು 5 ರಿಂದ 6 ಕೋಟಿ ರೂಪಾಯಿ ಬೆಲೆ ಬಾಳುವಂಥ ಸರ್ಕಾರಿ ಜಾಗವನ್ನು ಈಗಿರುವ ಪುರಸಭೆಯ ಅಧ್ಯಕ್ಷರು ತಮ್ಮ ಹೆಸರಿಗೆ ನಕಲಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಅಲ್ಲಿ ವಾಣಿಜ್ಯ ಮಳಿಗೆಯನ್ನು ಕಟ್ಟಿದ್ದಾರೆ. ಇದರ ಬಗ್ಗೆ ಅನೇಕ ದೂರುಗಳನ್ನು ಈಗಾಗಲೇ ಸರ್ಕಾರಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದು, ಅದರ ಬಗ್ಗೆ ಪರಿಶೀಲನೆ ಮಾಡಿ ಅವರ ಮೇಲೆ ತಹಶೀಲ್ದಾರ್ ರವರು ಕೇಸ್ ದಾಖಲು ಮಾಡಿದ್ದರು ಕೂಡ ಎ.ಸಿ. ಯವರು ಅದನ್ನು ಸ್ಟೇ ಮಾಡುವ ರೀತಿಯಲ್ಲಿ ಮಾಡುವುದು, ಮತ್ತೆ ಇದಕ್ಕೆ ಡಿ.ಸಿ.ಯವರು ಅವರಿಗೆ ಸಹಾಯ ಮಾಡುವ ರೀತಿಯಲ್ಲಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಸುಮಾರು ಕೋಟ್ಯಂತರ ರೂಪಾಯಿ ಬೆಲೆ ಬಾಳುವಂಥ ಜಾಗವನ್ನು ಅವರು ಕಬಳಿಸಿದ್ದು, ಅವರಿಗೆ ಯಾವುದೋ ರೂಪದಲ್ಲಿ ಸಹಾಯ ಮಾಡುವಂಥ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮಾಡುತ್ತಿದ್ದಾರೆ. ಆದ್ದರಿಂದ, ದಯಮಾಡಿ ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕು. ಇದರ ಜೊತೆಗೆ ಕೋಟಿಗಟ್ಟಲೆ ಬೆಲೆ ಬಾಳುವಂಥ ಕಂದಾಯ ಜಾಗವನ್ನು ಕಬಳಿಸುವಂಥ ಅನೇಕ ರೀತಿಯ ಪ್ರಕರಣಗಳು ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಆಗುತ್ತಿವೆ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಅಲ್ಲಿ ಒಟ್ಟು 17.20 ಎಕರೆ ಕೆರೆ ಅಂಗಳ ಇರುತ್ತದೆ. ಅದರಲ್ಲಿ ಸುಮಾರು 1.5 ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಒತ್ತುವರಿ ಬಗ್ಗೆ ಈಗಾಗಲೇ ನೋಟೀಸ್ ಕೊಟ್ಟು ವಿಚಾರಣೆ ಕೂಡ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಈಗ ಅವರು ಸಿಟಿ ಸಿವಿಲ್ ಕೋರ್ಟ್‌ಗೆ Statusquo ಆಜ್ಞೆಯನ್ನು ತಂದಿರುವುದರಿಂದ, Statusquo ಆಜ್ಞೆಯನ್ನು ತೆರವುಗೊಳಿಸಿದ ನಂತರ ನಾವು ಮುಂದಿನ ಕ್ರಮ ಜರುಗಿಸುತ್ತೇವೆ. ಒತ್ತುವರಿ ಮಾಡುವುದಕ್ಕೆ ಯಾವುದೇ ರೀತಿಯ ಅವಕಾಶ ಕೊಡುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಜಾಗವನ್ನು ಕಬಳಿಸಿರುವುದಲ್ಲದೆ, ಅವರು ಅಧಿಕಾರದಲ್ಲಿರುವಾಗ 24 ಗುಂಟೆ ಸರ್ಕಾರಿ ಜಾಗವನ್ನು ಮಾಡಿಕೊಂಡು ಮತ್ತೆ ಈಗ 4 ಗುಂಟೆ ಸೇರಿಸಿ ಕೊಂಡಿದ್ದಾರೆ. ಒಟ್ಟು 28 ಗುಂಟೆ ಮಠಕ್ಕೆ ಕೊಟ್ಟಂತೆ ಕೊಟ್ಟು ಮತ್ತೆ ವಾಪಸ್ಸು ತೆಗೆದುಕೊಂಡಿದ್ದಾರೆ. 1.5 ಗುಂಟೆ ಅಲ್ಲದೆ ಇದರ ಜೊತೆಗೆ ಇನ್ನು 8 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಆ ಬಗ್ಗೆ ಕೂಡ ದಯಮಾಡಿ ತಾವು ಪರಿಶೀಲನೆ ಮಾಡಬೇಕಾಗುತ್ತದೆ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಆಯಿತು.

10) ವಿಷಯ : ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಯ ಬಳಿಯಲ್ಲಿ ನಗರಸಭೆಯಲ್ಲಿ ಹಾಲಿ ಸದಸ್ಯರು ಹಾಗೂ ಮಾಜಿ ಉಪಾಧ್ಯಕ್ಷರು ವಿದ್ಯುತ್ ಇಲಾಖೆಗೆ ಸೇರಿದ 66 ಕೆ.ವಿ. ಹೈಟೆನ್‌ಷನ್ ತಂತಿಯ ಕೆಳಗೆ ಸರ್ಕಾರದ ನಿಯಮಾವಳಿಗಳ ವಿರುದ್ಧವಾಗಿ 5 ಅಂತಸ್ತಿನ ಕಟ್ಟಡವನ್ನು ನಿರ್ಮಿಸಿದ್ದು ಈ ವ್ಯಕ್ತಿಯ ಜೊತೆ ಶಾಮೀಲಾಗಿ ಅಕ್ರಮವಾಗಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಇಂಧನ ಇಲಾಖೆಗಳ ಅಧಿಕಾರಿಗಳ ಜೊತೆಗೆ ಅವರ ವಿರುದ್ಧ ಯಾವುದೇ ಕ್ರಮ ವಹಿಸದಿರುವ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಯ ಬಳಿಯಲ್ಲಿ ನಗರಸಭೆಯ ಹಾಲಿ ಸದಸ್ಯರು ಹಾಗೂ ಮಾಜಿ ಉಪಾಧ್ಯಕ್ಷರು ವಿದ್ಯುತ್ ಇಲಾಖೆಗೆ ಸೇರಿದ 66 ಕೆ.ವಿ.